<u>ದಿನಾಂಕಃ 06-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ ಕೆ.ಸಿ.ಎಸ್. ವಕೀಲರಿಂದಃ-</u>

ಈ ಅರ್ಜಿಯಲ್ಲಿ ನಾನು ಎದುರುದಾರನ ಪರ ಸಾಕ್ಷಿದಾರನಾಗಿದ್ದು ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಒಳಾಂಶಗಳನ್ನು ನಾನೇ ಖುದ್ದು ಹೇಳಿ ಬರೆಸಿದ್ದು, ಅವುಗಳು ಸತ್ಯವಾಗಿದ್ದು, ಸದರಿ ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಹಾಕಿರುತ್ತೇನೆ.

ಸಾಕ್ಷಿಗೆ ನಿಆರ್-3 ನ್ನ ತೋರಿಸಲಾಗಿ ಅದರ ಮೇಲೆ ಇರುವ ದೇವೇಗೌಡ ಇವರ ಹೆಬ್ಬೆಟ್ಟಿನ ಗುರುತುಗಳು, ಸಹಿಗಳು, ಫೋಟೋ, ತನ್ನ ಸಹಿ ಹಾಗೂ ಇತರ ಸಾಕ್ಷಿದಾರು ಸಹಿಗಳನ್ನ ನೋಡಿ ಗುರುತಿಸಿದ್ದಾರೆ. ಸಾಕ್ಷಿ ಗುರುತಿಸಿದ ಸಹಿಗಳು, ಹೆಬ್ಬೆಟ್ಟಿನ ಗುರುತು, ಫೋಟೋ, ತನ್ನ ಸಹಿ ಮತ್ತು ಇತರ ಸಾಕ್ಷಿದಾರರ ಸಹಿಗಳನ್ನ ನಿಆರ್-3(ಎ) ಯಿಂದ ನಿಆರ್-3(ಓ) ಎಂದು ಗುರುತಿಸಲಾಯಿತು. ನಾನು ನಿಆರ್-3 ರ ಮೇಲೆ ಉಪನೊದಣಾಧಿಕಾರಿ ಕಛೇರಿಯಲ್ಲಿ ಮಾಡಿರುತ್ತೇನೆ. ದೇವೇಗೌಡ ಇವರು ನನ್ನ ಮತ್ತುಇತರ ಸಾಕ್ಷಿದಾರರ ಸಮಕ್ಷಮದಲ್ಲಿ ಹೆಬ್ಬೆಟ್ಟಿನ ಗುರುತು ಮತ್ತು ಸಹಿ ಮಾಡಿದರು ಆನಂತರ ನಾನು ಮತ್ತು ಮತ್ತೊಬ್ಬ ಸಾಕ್ಷಿ ಸಹಿ ಮಾಡಿರುತ್ತೇವೆ.

<u>ಪಾಟೀ ಸವಾಲುಃ ಅರ್ಜಿದಾರ ಪರಃ ಶ್ರೀ ಜಿ.ಡಿ. ವಕೀಲರಿಂದಃ-</u>

(ಅರ್ಜಿದಾ  ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳುತ್ತಾರೆ. ಸಮಯಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ಎಸ್ಆರ್ಃ